‘ಸಾರ್, ಇವತ್ತು ಬೆಳಿಗ್ಗೆ ಹನ್ನೊಂದು ಗಂಟೆ ಐದು ನಿಮಿಷಕ್ಕೆ ನಮಗೆ ಕೊಲೆ ರಿಪೋರ್ಟ್ ಆಗಿರೋದು. ಅದರ ನಂತರ ಈ ತನಿಖೆಗೆ ಸಂಬಂಧಿಸಿದ ಪ್ರತಿಯೊಂದು ಘಟನೆ, ಕಾರ್ಯಾನೂ, ಡೇಟು, ಟೈಮು, ಸ್ಥಳ, ಆಮೇಲೆ ಯಾರ್ಯಾರು ಇದ್ದರು, ಇಷ್ಟೂನೂ ಕ್ರಮವಾಗಿ ಪಟ್ಟಿ ಮಾಡಿದ್ದೀನಿ. ಸ್ಟೇಷನ್ ಡೈರಿನಲ್ಲಿ ಎಂಟರ್ ಕೂಡ ಮಾಡಿದ್ದೀವಿ. ಆದರೆ ಕೊಲೆ ರಿಪೋರ್ಟ್ ಆದ ಸಮಯದ ಮುಂಚಿನದು, ಅಂದರೆ ಹನ್ನೊಂದು ಗಂಟೆ ಐದು ನಿಮಿಷದ ಮುಂಚಿನದು, ಮುಂದಕ್ಕೆ ತಿಳೀತಾ ತಿಳೀತಾ ಹೋದಂತೆ ಎಂಟರ್ ಮಾಡ್ಕೊಂಡು ಹೋಗ್ತೀವಿ ಸಾರ್.’

‘ವಾಟ್ ಎಬೌಟ್ ಚೈನ್ ಆಫ್ ಕಸ್ಟಡಿ?’

‘ಅದೂನೂ ಅಷ್ಟೇ ಸಾರ್. ಇಲ್ಲಿತನಕ ಎಲ್ಲಾ ಸಾಕ್ಷಿ ಪುರಾವೆಗಳು ನಮ್ಮ ಸೇಫ್ ಕಸ್ಟಡಿನಲ್ಲೇ ಇದೆ, ಅಷ್ಟರತನಕ ರೈಟರ್ ಕುಮಾರ್ ನೋಟ್ ಮಾಡಿದ್ದಾರೆ, ಜೊತೆಗೆ ಸ್ಟೇಷನ್ ಡೈರಿನಲ್ಲಿ ಎಂಟರ್ರೂ ಮಾಡಿದ್ದಾರೆ ಸಾರ್.’

ಭುಜಂಗನ ಕುರಿತು,

‘ವಿನಯ್ ಹೇಳುದ್ರು – ಸುತ್ತಾ ಅರ್ಧ ಮೈಲಿ ದೂರಕ್ಕೆ ಒಂದು ಸಿ.ಸಿ. ಟೀವಿನೂ ಇಲ್ಲ ಅಂತ. ಭುಜಂಗ, ನೀವು ಇದನ್ನ ಸೆಕೆಂಡ್ ಚೆಕ್ ಮಾಡಿ.’

‘ಯೆಸ್ ಸಾರ್.’

‘ನಮಗೆ ಇನ್ನೊಂದು ಹಿನ್ನಡೆ ಅಂದ್ರೆ, ಕ್ರೈಮ್ ಸ್ಪಾಟ್‌ನಲ್ಲಿ ಮರ್ಡರ್ ವೆಪನ್ ಸಿಕ್ಕಿಲ್ಲ. ವಿಚ್ ಇಸ್ ವೆರಿ ವೆರಿ ಇಂಪಾರ್ಟೆಂಟ್ ಇನ್ ಎನಿ ಮರ್ಡರ್ ಇನ್ವೆಸ್ಟಿಗೇಷನ್. ಮರ್ಡರ್ ವೆಪನ್ ಯಾವ್ದೂ ಅಂತಾನೂ ಗೊತ್ತಿಲ್ಲ.’

‘ಮುಕ್ಕಾಲ್ ವಾಸಿ ದೊಣ್ಣೆ ತಗೊಂಡು ಹೊಡುದ್ ಕೊಲೆ ಮಾಡ್ದಂಗಿತ್ತು ಸಾರ್.’

‘ಜವರಯ್ಯ ಇಲ್ಲಿ ಮುಖ್ಯ ಏನು ಅಂದ್ರೆ, ಆ ಆಯುಧ, ಮರ್ಡರ್ ಮತ್ತು ಮರ್ಡರರ್ ಎರಡೂ ತುದಿಗೆ ಲಿಂಕ್ ಆಗಬೇಕು, ಅದೂ ಕೋರ್ಟ್ ಒಪ್ಪುವ ರೀತೀಲೀ... ಸದ್ಯಕ್ಕೆ ನೀವು, ಮರ್ಡರ್ ಆಗಿರೊ ಚೇತನಾ ಲೇಔಟ್‌ನಲ್ಲಿ ಪೇಪರ್ ಹಾಕೋವ್ರು, ಹಾಲು ಹಾಕೋವ್ರು, ತರಕಾರಿಯವ್ರು, ಲಾಂಡ್ರಿಯವ್ರು, ಹೂವಿನವ್ರು, ಅಲ್ಲಿ ವಾಸ ಮಾಡೋ ಬೇರೇವ್ರು, ಎಲ್ಲಾರತ್ರ ಸ್ವಲ್ಪ ಹಾಗೆ ಕ್ಯಾಷುವಲ್ಲಾಗಿ ಮಾತಾಡಿ... ಏನಾದರೂ ಇನ್‌ಫರ್ಮೇಷನ್ ಸಿಗಬಹುದೇನೋ ನೋಡೋಣ... ಹಾಗೆಯೇ, ಅಪರಾಧಿ, ಕೊಲೆ ಮತ್ತು ತನಿಖೆಯ ಸ್ಥಳ ಹಾಗೂ ಸಂದರ್ಭಗಳಲ್ಲಿ ಇದ್ದು ಗಮನಿಸುವ ಸಾಧ್ಯತೆ ಇರುತ್ತೆ ಅಲರ್ಟಾಗಿರಿ.’

‘ಯೆಸ್ ಸಾರ್.’

ನಾಯಕನ ಸ್ಥಾನದಲ್ಲಿ ನಿಂತವನು ಹತಾಶೆಗೊಳ್ಳದೆ, ತನ್ನ ಕೆಳಗಿನ ಸಿಬ್ಬಂದಿಗಳ ಮನೋಸ್ಥೈರ್ಯ ಕುಂದದಂತೆ ಕಾಯಬೇಕಾಗುತ್ತದೆ. ಆ ಜವಾಬ್ದಾರಿಯನ್ನು ಯಶಸ್ವಿಯಾಗಿ ನಿರ್ವಹಿಸುತ್ತಿದ್ದ ಮಾಯಣ್ಣ, ‘ಯಾರೂ ಆತ್ಮವಿಶ್ವಾಸ ಕಳ್ಕೊಳ್ಬೇಕಾಗಿಲ್ಲ. ಕೆಲವು ಅಡ್ಡಿ ಅಡಚಣೆ ಇಲ್ಲಾ ಅಂದ್ರೆ ಏನೂ ಥ್ರಿಲ್ ಇರೋದಿಲ್ಲ. ಊಟ ಬಂತೇನ್ರಿ ವಿನಯ್?’ ಎಂದ.

‘ಬಂದಿದೆ ಸಾರ್.’

‘ಸಾರ್, ಆ ಫಿಂಗರ್ ಪ್ರಿಂಟ್‌ನವರು ಕೊಡೋ ಫಿಂಗರ್ ಪ್ರಿಂಟ್ ಫೋಟೊಗಳನ್ನ ತಗೊಂಡು ಏನ್ ಮಾಡೋದು ಸಾರ್?’

ಐದು ತಿಂಗಳ ಹಿಂದೆಯಷ್ಟೇ ಪೀಸಿ ಆಗಿ ಸೇರಿದ್ದ ಭುಜಂಗನಿಗೆ ಸ್ವಲ್ಪ ಕ್ಲಾರಿಟಿ ಬೇಕಿತ್ತು.

‘ಭುಜಂಗ, ನೀವು ಕೇಳಿದ್ದು ಒಳ್ಳೆಯದಾಯ್ತು. ವಿನಯ್, ನೀವು ಅಮ್ಮು ಅವರ ಮನೆಗೆ ಬಂದೂ ಹೋಗ್ತಿದ್ದವ್ರೆಲ್ಲರ ಬಯೋಮೆಟ್ರಿಕ್ ಸ್ಯಾಂಪಲ್ಸ್... ಅಂದರೆ ಕೂದಲು, ಬ್ಲಡ್ ಸ್ಯಾಂಪಲ್ಸ್, ಫಿಂಗರ್ ಪ್ರಿಂಟ್ಸ್ ಕಲೆಕ್ಟ್ ಮಾಡೋದಕ್ಕೆ ವ್ಯವಸ್ಥೆ ಮಾಡಿ... ಕ್ರೈಮ್ ಸೈಟಲ್ಲಿ ಕಲೆಕ್ಟ್ ಮಾಡಿದಂತಹ ಸ್ಯಾಂಪಲ್ಸ್ ಜೊತೆ ಹೋಲಿಕೆ ಮಾಡಿ ನೋಡೋದುಕ್ಕೆ ಬೇಕಾಗುತ್ತೆ.’

‘ಸಾರ್, ಕೆಲವರಿಗೆ ಇರುಸು ಮುರುಸು ಆಗಬಹುದೇನೋ.’

‘ಹೇಳಿ ನಿಮ್ಮನ್ನು, ಅಪರಾಧ ಮಾಡಿದವರಿಂದ ಬೇರೆ ಮಾಡೋದುಕ್ಕೆ ಇದು ಅಗತ್ಯ ಅಂತ. ನಾಜೂಕಾಗಿ ನಿಭಾಯಿಸಬೇಕು ಇದನ್ನೆಲ್ಲ.’

‘ಓಕೆ, ಹಾಗೆ ಊಟ ಮಾಡ್ತಾ ನಿಮಗೆ ಏನಾದ್ರು ಹೇಳೋದಿದ್ರೆ, ಕೇಳೋದಿದ್ರೆ ಮಾತಾಡೋಣ.’

‘ಸಾರ್, ಜ್ವರ ಬಂದಿರೋರ್ಗೆ ಥರ್ಮಾಮೀಟರ್ ಇಕ್ಕಿ ನೋಡ್ತಾರೆ. ಆದ್ರೆ ಆ ಡಾಕ್ಟರ್ ಡೆಡ್ ಬಾಡಿಗೇನೇ ಟೆಂಪ್ರೇಚರ್ ನೋಡುದ್ರಲ್ಲಾ ಸಾರ್?’

ಭುಜಂಗನನ್ನು ಕಾಡುತ್ತಿದ್ದ ಅನುಮಾನ ಹೊರಬಂದಿತ್ತು.

‘ಸತ್ತ ಮೇಲೆ ದೇಹ ತಣ್ಣಗಾಗೋದುಕ್ಕೆ ಶುರು ಆಗುತ್ತೆ... ಅದೂ ಏನೂ... ಸುಮಾರು ಒಂದು ಗಂಟೆಗೆ ಒಂದು ಡಿಗ್ರಿಯಂತೆ... ಉದಾಹರಣೆಗೆ, ಸುತ್ತಲೂ ಮೂವತ್ತೆರಡು ಡಿಗ್ರಿ ಇದ್ದು, ಬಾಡಿ ಟೆಂಪ್ರೇಚರ್ ಮೂವತ್ತಿದ್ರೆ ಸತ್ತು ಸುಮಾರು ಎರಡು ಗಂಟೆ ಆಗಿದೆ ಅನ್ನೋದು ಒಂದು ಅಂದಾಜು ಲೆಕ್ಕಾಚಾರ. ಸಾವು ಮತ್ತು ಡಾಕ್ಟರ್ ಮಾಡೋ ಈ ಟೆಸ್ಟ್‌ಗಳ ನಡುವಿನ ಸಮಯದ ಅಂತರವನ್ನು ಪೋಸ್ಟ್ ಮಾರ್ಟಮ್ ಇಂಟರ್ವಲ್ ಅಂತಾರೆ. ಅದರಿಂದ ನಮಗೆ, ಸಾವು ಸಂಭವಿಸಿದ ಸಮಯ ತಿಳಿಯುತ್ತೆ. ಅದು ಇನ್ವೆಸ್ಟಿಗೇಷನ್‌ಗೆ ಭಾಳಾ ಮುಖ್ಯ.’

ಮರೆತು ಮತ್ತೆ ಜ್ಞಾಪಿಸಿಕೊಂಡಂತೆ–

‘ಸಾವು ಆದ ಸಮಯ ತಿಳಿದುಕೊಳ್ಳೋದುಕ್ಕೆ ಬೇರೆ ಬೇಕಾದಷ್ಟು ವಿಧಾನಗಳಿವೆ... ಆದರೆ ಸ್ವಲ್ಪ ಸಮಯದ ಹಿಂದಷ್ಟೇ ನಡೆದ ಸಾವಿಗೆ ಇದು ಸೂಕ್ತವಾದ ವಿಧಾನ.’

‘ಸಾರ್ ಊಟ ತರ್ಲಾ?’

‘ಭುಜಂಗ ನನಗೆ ಸ್ವಲ್ಪನೇ ಸಾಕು... ಹಾಗೆ ಆ ಕ್ರೈಮ್ ಸ್ಪಾಟ್‌ಗೆ ಬಂದ, ಅಮ್ಮು ಕಡೆಯವರ್ನೆಲ್ಲಾ ಪೋಸ್ಟ್ ಮಾರ್ಟಮ್ ಆಸ್ಪತ್ರೆಗೆ ಕಳ್ಸಿದ್ದೀನಿ ಅಂತ ಫೋನ್ ಮಾಡಿದ್ರೂ ಕುಂಭಯ್ಯ. ಅಲ್ಲಿ ಆಸ್ಪತ್ರೆನಲ್ಲಿ ಯಾರಿದ್ದಾರೆ ನಮ್ಮವ್ರು?’

‘ರಂಗಯ್ಯ ಇದ್ದಾರೆ ಸಾರ್.’

‘ವಿನಯ್, ನೀವು ಅವರಿಗೆ ಫೋನ್ ಮಾಡಿ ಹೇಳಿ, ಪೋಸ್ಟ್ ಮಾರ್ಟಮ್ ಮುಗಿದು ಬಾಡಿ ಹೊರಗೆ ಬರೋದು ನಾಳೆ ಮಧ್ಯಾಹ್ನ ಅಥವಾ ಸಂಜೆ ಆಗಬಹುದು ಅಂತ.’

‘ಸಾರ್ ವಿಚಾರ್ಸಿದ್ದೀನಿ, ವಿಜಯಮ್ಮ... ಅಂದ್ರೆ ಅಮ್ಮು ಅವರ ಮಲತಾಯಿ ಇಲ್ಲೇ ಬೆಂಗಳೂರಲ್ಲಿ ಅವರ ನೆಂಟರ ಮನೇಲಿ ಉಳಕೊಂಡು, ನಾಳೆ ಬಾಡೀನ ಅವರ ಎಸ್ಟೇಟ್‌ಗೆ ತಗೊಂಡೋಗಿ ಅಲ್ಲಿ ಕ್ರಿಮಿಯೇಟ್ ಮಾಡ್ತಾರಂತೆ.’

‘ವಿನಯ್, ಅದಕ್ಕೆ ಮುಂಚೆ ಅವರ ವಿಚಾರಣೆ ಮಾಡೋದು, ಹೇಳಿಕೆ ತಗೋಳದು... ಅಷ್ಟು ಚೆನ್ನಾಗಿರಲ್ಲ... ಎಲ್ಲಾ ಮುಗೀಲಿ. ನಾವೇ ಅಲ್ಲಿ ಹೋಗಿ ಯಾರ್ಯಾರ ಜೊತೆ ಮಾತಾಡ್ಬೇಕೋ ಅವರೆಲ್ಲರ ಜೊತೆ ಮಾತಾಡೋಣ... ಅಲ್ಲಿತನಕ ಇಲ್ಲಿನ ಲೋಕಲ್ ಬಂಧು–ಮಿತ್ರರ ಜೊತೆ ನಮ್ಮ ಮಾತುಕತೆ ನಡೀಲಿ.’

ಭುಜಂಗನ ತಲೇಲಿ ಇನ್ನೊಂದು ಹೊಸ ಹುಳ ಸೇರಿತ್ತು.

‘ಸಾರ್, ಅಲ್ಲಿ ಕ್ರೈಮ್ ಸೈಟ್‌ನಲ್ಲಿ ಇನ್‌ವೆಸ್ಟಿಗೇಷನ್ ಎಲ್ಲಾ ಮುಗಿತಲ್ಲ. ಅಮ್ಮು ಅವರ ಮನೇನ ಏನುಕ್ಕೆ ಸೀಲ್ ಮಾಡಿ ಕುಂಭಯ್ಯ ಅವ್ರುನ್ನ ನಿಲ್ಸಿದ್ದೀರ?’

‘ಯಾರು ಹೇಳಿದ್ದು ಅಲ್ಲಿ ತನಿಖೆ ಪೂರ್ತಿ ಮುಗಿದಿದೆ ಅಂತ. ಅಲ್ಲಿ ಇನ್ನೂ ಇರಬಹುದಾದ ಯಾವುದೇ ಸಾಕ್ಷಿ ನಾಶ ಆಗ್ಬಾರ್ದು. ನಾವು ಮತ್ತೆ ಅಲ್ಲಿಗೆ ಹೋಗಬೇಕಾಗಬಹುದು.’

ಸ್ಟೇಷನ್ನಿನ ಎಲ್ಲಾ ಸಿಬ್ಬಂದಿಗಳು ಪರಸ್ಪರ ವಿನಿಮಯದಲ್ಲಿ, ಕೇಳುತ್ತಾ, ಹೇಳುತ್ತಾ, ಇಡೀ ತನಿಖಾ ಪ್ರಕ್ರಿಯೆಯಲ್ಲಿ, ಸಕ್ರಿಯವಾಗಿ ಒಳಗೊಳ್ಳುವಂತಹ ವಾತಾವರಣ ಸೃಷ್ಟಿಸಿ ನೈಜ ನಾಯಕತ್ವ ಮೆರೆದಿದ್ದ ಮಾಯಣ್ಣ.

‘ವಿನಯ್, ನನಗೆ ಸ್ವಲ್ಪ ವಿಶ್ರಾಂತಿ ಬೇಕಾಗಿದೆ. ನನ್ನ ಯಾರು ಡಿಸ್ಟರ್ಬ್ ಮಾಡೋದು ಬೇಡ.’

‘ಯೆಸ್ ಸಾರ್... ನಾವು ಮ್ಯಾನೇಜ್ ಮಾಡ್ತೀವಿ. ನೀವು ರೆಸ್ಟ್ ತಗೊಳ್ಳಿ ಸಾರ್.’

‘ಓ ಮೈ ಗಾಡ್... ಒಂದನ್ನ ಮರೆತು ಬಂದ್ವಿ ನೋಡಿ ವಿನಯ್.’

‘ಏನದು ಸಾರ್?’

‘ಅಲ್ಲೇ ಪೋರ್ಟಿಕೋನಲ್ಲಿ ಅಮ್ಮು ಅವರ ಸ್ಕೂಟರ್ ಮತ್ತೆ ಕಾರು ಸರ್ಚ್ ಮಾಡದೇ ಬಂದ್ವೀ ನೋಡಿ.’

‘ಏನೂ ಟ್ಯಾಂಪರ್ ಆಗಿರಲ್ಲ ಸಾರ್... ಅಲ್ಲಿ ನಮ್ಮ ನೈಟ್ ಗಾರ್ಡ್ ಕುಂಭಯ್ಯ ಇದ್ದಾರಲ್ಲ...’

‘ಓಕೆ, ಕುಂಭಯ್ಯ ಅವರಿಗೆ ಫೋನ್ ಮಾಡಿ ಹೇಳಿ. ಅದರ ಬಗ್ಗೆ ಗಮನ ಇರಲಿ ಅಂತ. ಬೆಳಿಗ್ಗೆ ನೀವು ಕಾಟಯ್ಯ ಅವರ ಜೊತೆ ಹೋಗಿ ನೋಡಿ ಏನಾದರೂ ಸಿಗಬಹುದೇನೊ. ಹಾಗೆ ಅಲ್ಲಿರೋ ಪೇಪರ್ಸು, ಡಾಕ್ಯುಮೆಂಟ್ಸ್ ಇನ್ನೂ ಏನೇನಿದೆಯೋ ಎಲ್ಲಾ ತನ್ನಿ. ಇಲ್ಲಾಂದ್ರೆ ನಾನೇ ಬರ್ತೀನಿ ಬಿಡಿ.’

ಚೇರ್ ಮೇಲೆ ಹಾಗೇ ಒರಗಿ ಕಾಲು ನೀಡಿಕೊಂಡರೂ, ಚಡಪಡಿಸುತ್ತಾ ಮಾಯಣ್ಣನ ಮೆದುಳು ಇನ್ನೂ ಗರಗರ ಓಡುತ್ತಲೇ ಇತ್ತು. ಬೆಳಗಿನಿಂದ ನಡೆದ ಬಿಡಿ ಬಿಡಿ ಘಟನೆಗಳನ್ನು ಒಂದೊಂದಾಗಿ ಒಡೆದು ಅದರ ಒಳಾರ್ಥಗಳನ್ನೆಲ್ಲಾ ಹೆಕ್ಕಿ, ಒತ್ತಟ್ಟಿ, ಒಂದು ಸಮಗ್ರ ಚಿತ್ರದ ಹುಡುಕಾಟದಲ್ಲಿತ್ತು.

ಮಾಯಣ್ಣನ ತಲೆಯಲ್ಲಿ ಅದಾಗಲೇ ಶಂಕಿತರ